ನಂತರ ಸಾಯಂಕಾಲ ೬-೦೦ ಘಂಟೆಗೆ ಸುಮಾರಿಗೆ ಮಹಮದ್ ಖಾನ್ ಸಮಶೇರ್ ಖಾನ ಪಠಾಣ ಸಾ. ಬೊಮ್ಮನಹಳ್ಳಿ ಎಂಬುವವರು ಆರಕ್ಷಕ ಠಾಣೆಯಲ್ಲಿ ಹಾಜರಾಗಿ ತನ್ನ ಲಿಖಿತ ದೂರನ್ನು ಸಲ್ಲಿಸಿದ್ದರಲ್ಲಿ ದಿನಾಂಕ ೨೬-೧-೧೯೮೬ ರಂದು ಮಧ್ಯಾಹ್ನ ೨-೦೦ ಘಂಟೆಗೆ ಸುಮಾರಕ್ಕೆ ತಾನು ತನ್ನ ಕೆಲಸದ ಸಲುವಾಗಿ ಹಾನಗಲ್ ಹಳೇ ಬಸ್ಟಾಂಡಿಗೆ ಹೋಗುವಾಗ ಒಬ್ಬ ಶಂಕರಪ್ಪ ಕೊಲ್ಲಾವರ ಎಂಬುವನು ತನಗೆ ಅವಾಚ್ಯ ಶಬ್ದಗಳಿಂದ ಬೈದು ಕಾಂಗ್ರೆಸಿನವನೇನು ನಮ್ಮ ಶಾಸಕರ ವಿರುದ್ಧ ಘೋಷಣೆ ಕೂಗುತ್ತೀಯೇನು ಅಂತ ಅಂದು ತನ್ನ ಮೈಮೇಲಿನ ಬಟ್ಟೆ ತೆಗೆದು ತೊಡೆ ತಟ್ಟಿ ಬೆನ್ನಿನ ಬದಿಗೆ ಗುದ್ದಿದನು ಅಂತ ವಗೈರೆ ತಿಳಿಸಿದ್ದರ ಮೇಲೆ ಎನ್.ಸಿ. ನಂ ೧೪/೮೬ ಕಲಂ ೩೨೩, ೫೦೪ ಜೊತೆ ಕಲಂ ೩೪ ಐಪಿಸಿ ಪ್ರಕಾರ ದಾಖಲು ಆಗಿರುತ್ತದೆ.

ಮೇಲಿನ ಎರಡು ಪಕ್ಷದ ಕಾರ್ಯಕರ್ತರಲ್ಲಿ ಉದ್ಭವವಾದ ವಾದ ವಿವಾದ ಹಾಗೂ ಎರಡು ಪಂಗಡದವರು ಒಬ್ಬರ ಮೇಲೊಬ್ಬರು ತಮ್ಮ ದೂರನ್ನು ಠಾಣೆಯಲ್ಲಿ ದಾಖಲು ಮಾಡಿದರಿಂದ ಉಭಯ ಪಂಗಡಗಳ ಮಧ್ಯೆ ಯಾವುದೇ ತರಹದ ಗಲಾಟೆ ಆಗಿ ಶಹರದಲ್ಲಿ ಶಾಂತಿ ಸುವ್ಯವಸ್ಥೆ ಕೆಡಬಾರದೆಂಬ ಉದ್ದೇಶದಿಂದ ಮುಂಜಾಗ್ರತೆ ಕ್ರಮ ಕೈಗೊಳ್ಳುವ ಸಲುವಾಗಿ ಎರಡೂ ಪಂಗಡಗಳ ಕಾರ್ಯಕರ್ತರಾದ ಅಂದರೆ ಕಾಂಗ್ರೆಸ್ (ಐ) ಅಬ್ದುಲ್ ವಹಾಬ್ ಲೋಹಾರ ೨) ಮಹಮದ್‌ಗೌಸ್ ಪಠಾಣ ೩) ಗೌಸ್ ಮೊಹದಿನ ಮುಲ್ಲಾ ಹಾಗೂ ೪) ರಾಜಶೇಖರ ಸಾಲಿಮಠ ಮತ್ತು ಜನತಾ ಕಾರ್ಯಕರ್ತರಾದ ೧) ಮನೋಹರ ಕಲಾಲ. ೨) ಶಾಂತಪ್ಪ ಶಹಪುರ, ೩) ಶಶಿಧರ ಕಟಗಿಹಳ್ಳಿಮಠ, ಮತ್ತು ೪) ಗದಿಗೆಪ್ಪ ಗಂಜಿಗಟ್ಟಿ ಎಂಬುವವರ ವಿರುದ್ಧ ಪೊಕದ್ದಮೆ ನಂಬರ್ ೧೨/೮೬ ಕಲಂ ೧೦೭ ಸಿಆರ್ ಪಿಸಿ ಪ್ರಕಾರ ದಾಖಲು ಮಾಡಿಕೊಳ್ಳಲಾಗಿದೆ.

ಮೇಲೆ ನಮೂದಿಸಿದ ಚಿಕ್ಕಪುಟ್ಟ ಘಟನೆಗಳ ಹೊರತಾಗಿ ಹಾನಗಲ್ ಶಹರದಲ್ಲಿ ಇತರ ಯಾವುದೇ ತರಹದ ಅಹಿತಕರ ಘಟನೆಗಳು ಎರಡು ಪಂಗಡಗಳಿಂದ ಆಗದಂತೆ ಸ್ಥಳೀಯ ಪೋಲೀಸರು ಎಚ್ಚರಿಕೆ ವಹಿಸಿ ನಿಯಂತ್ರಿಸಿದ್ದಾರೆ.

ಆದಾಗ್ಯೂ ಹಾನಗಲ್ಲ ಶಹರದಲ್ಲಿ ಹೆಚ್ಚಿನ ಪೋಲೀಸ್ ಕಾವಲು ಇಟ್ಟಿದ್ದು ಸದ್ಯ ಶಾಂತ ವಾತಾವರಣ ಇರುತ್ತದೆ.

(iv) ಸುಳ್ಯ ಪೋಲಿಸ್ ಠಾಣೆಯ ಇಬ್ಬರು ಕಾನ್ಸ್‌ಟೇಬಲ್‌ಗಳ ಮೇಲೆ ಕ್ರಮ ಕೈಗೊಳ್ಳುವ ಬಗ್ಗೆ.

೪—೦೦ ಪಿ. ಎಂ.

ಮಾನ್ಯ ಅಧ್ಯಕ್ಷರೇ, ಮಾನ್ಯ ಕೆ. ಕುಶಾಲ ಅವರು ನಿಯಮ ೩೩ಳಿರ ಪ್ರಕಾರ ಕೊಟ್ಟಿರುವ ಸೂಚನೆಗೆ ನಾನು ಈ ಹೇಳಿಕೆಯನ್ನು ಕೊಡಬಯಸುತ್ತೇನೆ.

ಮೇಲ್ಕಂಡ ಸೂಚನೆಯಲ್ಲಿ ಮಾನ್ಯ ಸದಸ್ಯರು ಸುಳ್ಯ ಪೊಲೀಸ್ ಠಾಣೆಯಲ್ಲಿರುವ ಪೊಲೀಸ್ ಕಾನ್ಸ್‌ಟೇಬಲ್‌ಗಳಿಬ್ಬರು ಕೆಲವು ವರ್ಷಗಳಿಂದ ಇದ್ದುಕೊಂಡು ಸದರೀ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಡೆಯುವ ಭ್ರಷ್ಟಾಚಾರ ಇತ್ಯಾದಿಗಳಿಗೆ ಸೂತ್ರದಾರಿಗಳೆಂದು ಸಾರ್ವಜನಿಕರ ಅಭಿಪ್ರಾಯ ಪಟ್ಟರೂ ಅವರ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲವೆಂದು ಆಪಾದಿಸಿದ್ದಾರೆ. ಆದರೆ ಅವರ ಹೆಸರು ಇತ್ಯಾದಿಗಳನ್ನು ನಮೂದಿಸಿರುವುದಿಲ್ಲ.

ಸುಳ್ಯ ಪೋಲೀಸ್ ಠಾಣೆಯಲ್ಲಿರುವ ಯಾವ ಪೋಲೀಸ್ ಕಾನ್ಸ್‌ಟೇಬಲ್‌ಗಳ ವಿರುದ್ಧ ಲಂಚ ಸ್ವೀಕರಿಸುತ್ತಿದ್ದಾರೆ ಅಥವಾ ಕೇಳುತ್ತಾರೆ ಎಂಬುದರ ಬಗ್ಗೆ ಯಾವ ನಿರ್ದಿಷ್ಟ ದೂರುಗಳು ಬಂದಿರುವುದಿಲ್ಲ. ದೂರುಗಳು ಬಂದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ಮಾನ್ಯ ಸದಸ್ಯರು ಅವರ ಹೆಸರುಗಳನ್ನು ಸೂಚಿಸಿದರೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.